**ದಿನಾಂಕ 27–07–2023 ರಂದು ಬೆಳಗ್ಗೆ 11.00 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 54ನೇ ಸಭೆಯ ನಡವಳಿಗಳು:**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಎಂ. ಹನುಮಂತಪ್ಪ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಡಾ|| ಮಂಗಳಾ, ಜಿ.ಎಸ್, ಸರ್ಕಾರದ ಅಪರ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 3. | ಶ್ರೀ ಮಲ್ಲಿಕಾರ್ಜುನ, ಡಿ., ಯಾದಗಿರಿ | ಸದಸ್ಯರು | ಭೌತಿಕ |
| 4. | ಶ್ರೀ ಬಸವನಗೌಡ ಬ್ಯಾಗವಾಟ್, ಮಾನವಿ | ಸದಸ್ಯರು | ಭೌತಿಕ |
| 5. | ಡಾ|| ಶ್ರೀನಿವಾಸ್ ರಾವ್, ನಿರ್ದೇಶಕರು, NAARM, ಹೈದ್ರಾಬಾದ್ | ಸದಸ್ಯರು | ಭೌತಿಕ |
| 6. | ಡಾ. ಎಂ. ವೀರನಗೌಡ, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ವರ್ಚುವಲ್ ಹಾಗೂ ಭೌತಿಕವಾಗಿ ಹಾಜರಿದ್ದ ಎಲ್ಲಾ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನು ಸ್ವಾಗತಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| 1 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 53 ನೇ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವುದು.**<br><br>**ಠರಾವು:**<br>ದಿನಾಂಕ 17–03–2023 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 54ನೇ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲಾಯಿತು.<br><br>**(ಕ್ರಮ : ಕುಲಸಚಿವರು)** |
| 2 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 53 ನೇ ಸಭೆಯ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br>**ಠರಾವು:**<br>ದಿನಾಂಕ 17–03–2023 ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 53ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು.<br><br>**(ಕ್ರಮ : ಕುಲಸಚಿವರು)** |

| | |
|---|---|
| ಐಟಂ–1 | **ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.** |
| | **ಠರಾವು:** |
| | ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಉಪಕರಣವನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು: |

| Sl. No. | Name of the Equipment | Name of the Department/ Project | Qty | Unit Cost (Approx) (Rs. In Lakhs) | Approx. Cost in (Rs. In Lakhs) | Grants |
|---|---|---|---|---|---|---|
| 1. | Interactive Panel and Accessories | Special Officer, AC, Gangavathi and Dean (Agri) Ac, B'Gudi. | 4 | 5.00 | 20.00 | Under UAS Grants |

**(ಕ್ರಮ : ಸರಕು ಖರೀದಿ ಅಧಿಕಾರಿ)**

| | |
|---|---|
| ಐಟಂ–2 | **ಕೃವಿವಿ., ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.** |
| | **ಠರಾವು:** |
| | ಚರ್ಚೆಯ ನಂತರ, ಈ ಕೆಳಕಂಡ ಸಿಬ್ಬಂದಿಯವರು **ಸರಕಾರ / ಕೃವಿವಿ.,ದಿಂದ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಪಡೆದು ಸಲ್ಲಿಸಲಾದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು** ವೈದ್ಯಕೀಯ ಅಟೆಂಡೆನ್ಸ್ ನಿಯಮಾವಳಿಗಳನ್ವಯ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರು ಪರಿಶೀಲಿಸಿ ಮೇಲುರುಜುಗೊಂಡ ಮೊತ್ತದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ ಅನುಮೋದನೆ ನೀಡಿತು : |

| ಕ್ರ ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಕ್ಲೇಮು ಮಾಡಿದ ಮೊತ್ತ (ರೂ.) | ಕೃವಿವಿ., ವೈದ್ಯಾಧಿಕಾರಿಗಳು ತಪಾಸಿಸಿದ ಮೊತ್ತ (ರೂ) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಬೆಂಗಳೂರು ಇವರು ಪರಿಶೀಲಿಸಿ ಮೇಲುರುಜು ಮಾಡಿದ ನಂತರ ಪಾವತಿಸ ಬೇಕಾದ ಮೊತ್ತ (ರೂ) |
|---|---|---|---|---|
| 1 | ಶ್ರೀ. ಶಿವಪುತ್ರ ಪ್ರಕಾಶ್<br>ಹಿರಿಯ ಕ್ಷೇತ್ರ ಸಹಾಯಕ<br>ಕೃಷಿ ಸಂಶೋಧನಾ ಕೇಂದ್ರ, ಬೀದರ. | 55,419=00 | 19,040=00 | 12,645=00 |
| 2 | ಶ್ರೀ. ಕಲ್ಲಪ್ಪ ಡಿ<br>ಕ್ಷೇತ್ರ ಸಹಾಯಕ<br>ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ. | 1,48,642=00 | 70,932=00 | 45,028=00 |
| 3 | ಶ್ರೀ. ಅಮರೇಶ್ ಕುರಿ<br>ಲಘುವಾಹನ ಚಾಲಕ<br>ಡೀನ್ (ವಿ.ಕ್ಷೇ) ಕಛೇರಿ ಕೃ.ವಿ.ವಿ., ರಾಯಚೂರು. | 45,452=00 | 23,191=00 | 9,775=00 |
| 4 | ಶ್ರೀ. ಬಸಲಿಂಗಪ್ಪ ಎಸ್ ಮೆಣಸಿನಕಾಯಿ<br>ಕ್ಷೇತ್ರ ಪ್ರಯೋಗಶಾಲಾ ಸಹಾಯಕ<br>ಕೃಷಿ ಮಹಾವಿದ್ಯಾಲಯ ಗಂಗಾವತಿ. | 1,10,316=00 | 42,346=00 | 12,048=00 |

| | |
|---|---|
| | ಮುಂದುವರೆದು, ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವಂತೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದು, ವಿಶ್ವವಿದ್ಯಾಲಯದಿಂದ ಗುಂಪು ಆರೋಗ್ಯ ವಿಮೆಯನ್ನು ಜಾರಿಗೊಳಿಸಲು ಸೂಕ್ತ ಕ್ರಮವಿಡಲು ಮಂಡಳಿಯು ಸಲಹೆ ನೀಡಿತು. ಅಲ್ಲದೇ, ಈ ಕುರಿತು ಡೀನ್ (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ) ಇವರನ್ನು ಸದರಿ ಕಾರ್ಯಕ್ಕೆ ನಿಯೋಜಿಸಲು ಮಂಡಳಿಯು ನಿರ್ಣಯಿಸಿತು.<br>**(ಕ್ರಮ: ಕುಲಸಚಿವರು / ಆಡಳಿತಾಧಿಕಾರಿಗಳು / ಡೀನ್ (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ))** |
| ಐಟಂ–3 | **ಸಿ.ಎ.ಎಸ್. ಯೋಜನೆಯಡಿ ಪದೋನ್ನತಿಗಾಗಿ ಅರ್ಜಿ ಸಲ್ಲಿಸಿದ ಶಿಕ್ಷಕರುಗಳಿಂದ ಸಂಗ್ರಹಿಸುವ ಪ್ರೊಸೆಸಿಂಗ್– ಶುಲ್ಕವನ್ನು ಪರಿಷ್ಕರಿಸುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಸಿ.ಎ.ಎಸ್.–2016 ರ ಅಡಿ ಪದೋನ್ನತಿಗಾಗಿ ಅರ್ಜಿ ಸಲ್ಲಿಸಿದ ಶಿಕ್ಷಕರುಗಳಿಂದ ಪ್ರೊಸೆಸಿಂಗ್ ಫೀ ಅನ್ನು ಈ ಕೆಳಗೆ ತಿಳಿಸಿದ ಪರಿಷ್ಕೃತ ಧರದಲ್ಲಿ ದಿನಾಂಕ 15–03–2023 ರಿಂದ ಅನ್ವಯವಾಗುವಂತೆ ಸಂಗ್ರಹಿಸುವ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ನೀಡಿತು:<br>ಶೈಕ್ಷಣಿಕ ಹಂತ 10 ರಿಂದ 11 – ರೂ. 2,000/– ಪ್ರತಿಯೊಂದಕ್ಕೆ<br>ಶೈಕ್ಷಣಿಕ ಹಂತ 11 ರಿಂದ 12 – ರೂ. 2,500/– ಪ್ರತಿಯೊಂದಕ್ಕೆ<br>ಶೈಕ್ಷಣಿಕ ಹಂತ 12 ರಿಂದ 13ಎ – ರೂ. 3,000/– ಪ್ರತಿಯೊಂದಕ್ಕೆ<br>ಶೈಕ್ಷಣಿಕ ಹಂತ 13ಎ ರಿಂದ 14 – ರೂ. 4,000/– ಪ್ರತಿಯೊಂದಕ್ಕೆ<br>ಎಚ್.ಎ.ಜಿ. ಶ್ರೇಣಿಯ ಪದೋನ್ನತಿಗಾಗಿ – ರೂ. 5,000/– ಪ್ರತಿಯೊಂದಕ್ಕೆ<br>**(ಕ್ರಮ: ಕುಲಸಚಿವರು)** |
| ಐಟಂ–4 | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಎಸ್.ಆರ್. ಧರದ ಮೇಲೆ ಕಾರ್ಯನಿರ್ವಹಿಸುತ್ತಿರ ಸಿಬ್ಬಂದಿಗಳ ವೇತನವನ್ನು ಪರಿಷ್ಕರಿಸುವ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಸದರಿ ಪ್ರಸ್ತಾವನೆಯನ್ನು ಪ್ರಸ್ತುತ ಕೈಬಿಡಲು ಸಭೆಯು ನಿರ್ಣಯಿಸಿತು.<br>**(ಕ್ರಮ: ಕುಲಸಚಿವರು)** |
| ಐಟಂ–5 | **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಮತ್ತು ವಿಶ್ವವಿದ್ಯಾಲಯದ ಇತರೆ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡ್ರೋನ್ ಅಪರೇಟರ್‌ಗಳ ವೇತನವನ್ನು ಪರಿಷ್ಕರಿಸುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಮತ್ತು ವಿಶ್ವವಿದ್ಯಾಲಯದ ಇತರೆ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡ್ರೋನ್ ಆಪರೇಟರ್‌ಗಳ ವೇತನವನ್ನು ದಿನಾಂಕ 01–08–2023 ರಿಂದ ಅನ್ವಯವಾಗುವಂತೆ ರೂ. 25,000/– (ರೂಪಾಯಿ ಇಪ್ಪತ್ತೈದು ಸಾವಿರಗಳು ಮಾತ್ರ) ಗಳಿಗೆ ಹೆಚ್ಚಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದಿಸಿತು.<br>**(ಕ್ರಮ: ಕುಲಸಚಿವರು)** |
| ಐಟಂ–6 | **ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯದಲ್ಲಿರುವ** LC-MS/MS **ನ ಉಪಕರಣವನ್ನು ಮೂರು ವರ್ಷಗಳ ಅವಧಿಗೆ** (2023-2026) CMC/AMC **ಮಾಡಿಸಲು ಹಾಗೂ ಅದಕ್ಕೆ ತಗಲುವ ರೂ.** 21,14,560/- **ಅನುದಾನಕ್ಕೆ ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯದಲ್ಲಿರುವ LC-MS/MS ನ ಉಪಕರಣವನ್ನು ಮೂರು ವರ್ಷಗಳ ಅವಧಿಗೆ (2023-2026) CMC/AMC ಮಾಡಿಸಲು ಹಾಗೂ ಅದಕ್ಕೆ ತಗಲುವ ವೆಚ್ಚ ರೂ. 21,14,560/- ಕ್ಕೆ ಮಾನ್ಯ ವ್ಯವಸ್ಥಾಪನಾ |

| | |
|---|---|
| | ಮಂಡಳಿಯ ಅನುಮೋದನೆ ನೀಡಿತು.<br>**(ಕ್ರಮ : ಮುಖ್ಯಸ್ಥರು–ಪಿ.ಆರ್.ಎಫ್.ಕ್ಯೂ.ಎ.ಎಲ್)** |
| **ಐಟಂ–7** | **ಕೃಷಿ ಮಹಾವಿದ್ಯಾಲಯ ರಾಯಚೂರಿಗೆ ಸ್ಕಾರ್ಪಿಯೊ ವಾಹನವನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಕೃಷಿ ಮಹಾವಿದ್ಯಾಲಯ ರಾಯಚೂರಿನಲ್ಲಿ ಅಭ್ಯಸುತ್ತಿರುವ ಅಂತಿಮ ವರ್ಷದ ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ (RAWE) ಕಾರ್ಯಕ್ರಮದಲ್ಲಿ ಭಾಗವಹಿಸಲು ಮತ್ತು ವಿವಿಧ ಕ್ಷೇತ್ರ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗಲು ರೂ. 10.00 ಲಕ್ಷಗಳ ಅನುದಾನದಲ್ಲಿ ಬೊಲೆರೋ ವಾಹನವನ್ನು ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ನೀಡಿತು.<br>**(ಕ್ರಮ: ಸರಕು ಖರೀದಿ ಅಧಿಕಾರಿ)** |
| **ಐಟಂ–8** | Aseptic packing Unit with clean room and shifting, erecting of existing fruits and vegetables processing Unit **ಅನುಷ್ಠಾನ ಗೊಳಿಸುವ ಸಂಬಂಧ ಪರಿಷ್ಕೃತ ಜಿಎಸ್‌ಟಿ ದರವನ್ನು ಪಾವತಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, Aseptic packing Unit with clean room and shifting, erecting of existing fruits and vegetables processing Unit ಅನುಷ್ಠಾನ ಗೊಳಿಸುವ ಸಂಬಂಧ ಯಶಸ್ವಿ ಬಿಡ್‌ದಾರರಿಗೆ ಪರಿಷ್ಕೃತ ಜಿಎಸ್‌ಟಿ ದರವನ್ನು (ಶೇ. 18ರಷ್ಟು) ಪಾವತಿಸುವ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದಿಸಿತು.<br>**(ಕ್ರಮ: ಕುಲಸಚಿವರು)** |
| **ಐಟಂ–9** | **2008–09 ರಲ್ಲಿ ಶ್ರೀ ವಿನಯ ಬಿ. ಪಾಟೀಲ್ ಇವರಿಗೆ ಬಿ.ಎಸ್.ಸಿ (ಕೃಷಿ) ಪದವಿ ಪ್ರವೇಶಾತಿಗೆ ಸಂಬಂಧಿಸಿದಂತೆ ಶ್ರೀ ಟಿ. ಮಾರೆಪ್ಪ ಇವರ ಆರೋಪದ ಪ್ರಕರಣವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ವಿಲೇವಾರಿ ಮಾಡಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಶ್ರೀ. ಟಿ. ಮಾರೆಪ್ಪ ಇವರು ದಿನಾಂಕ 4-11-2016, 3-10-2018, 12-10-2018 ರಲ್ಲಿ ಶ್ರೀ ವಿನಯ್ ಪಾಟೀಲ್ ತಂದೆ ಡಾ॥ ಬಿ.ವಿ. ಪಾಟೀಲ್, ವಿಶ್ರಾಂತ ಕುಲಪತಿಗಳು, ಕೃವಿವಿ., ರಾಯಚೂರು ಇವರು ತಪ್ಪಾದ ದಾಖಲೆಗಳನ್ನು ನೀಡಿ ಕೃಷಿ ಕೋಟಾದಡಿಯಲ್ಲಿ ಬಿ.ಎಸ್ಸಿ. (ಕೃಷಿ) ಪದವಿಗೆ ಪ್ರವೇಶಾತಿಯನ್ನು ಪಡೆದಿರುತ್ತಾರೆ ಎಂದು ಆರೋಪಿಸಲಾಗಿರುತ್ತದೆ. ಸದರಿ ವಿಷಯವನ್ನು ದಿನಾಂಕ 27-07-2023 ರಂದು ನಡೆದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 54ನೇ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿ, ರಿಟ್ ಅರ್ಜಿ ಸಂ. 55601/2018 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಮ, ಸರ್ಕಾರದ ನಿರ್ದೇಶನದ ಪತ್ರಗಳು ಹಾಗೂ ಡಾ. ಎಸ್.ಕೆ. ಮೇಟಿ ಸಮಿತಿಯ ವರದಿಯನ್ನು ಪರಿಶೀಲಿಸಿ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಬಂದ ಪತ್ರಗಳು / ಆದೇಶಗಳು / ವರದಿಗಳು ಮುಖ್ಯವಾಗಿ ಲಿಂಗಸೂಗೂರು ತಹಸಿಲ್ದಾರರು ಮತ್ತು ರಾಯಚೂರು ಜಿಲ್ಲಾಧಿಕಾರಿಗಳು ಕೃಷಿ ಆದಾಯದ ಪತ್ರದ ಬಗ್ಗೆ ನೀಡಿದ ಹಿಂಬರಹ, ಪೋಲಿಸ್ 'ಬಿ' ರಿಪೋರ್ಟ ಮತ್ತು ಇದಕ್ಕೆ ಸಂಬಂಧಿಸಿದಂತೆ ರಾಯಚೂರು ಜಿಲ್ಲಾ ನ್ಯಾಯಾಧೀಶರ ಆದೇಶ, ಹೈದ್ರಾಬಾದ್‌ನ ವಿಧಿ–ವಿಜ್ಞಾನ ಪ್ರಯೋಗಾಲಯ ರಿಪೋರ್ಟ ಮತ್ತು ಅತೀ ಮುಖ್ಯವಾಗಿ ಡಾ. ಎಸ್. ಬಿ. ದಂಡಿನ್ ಉನ್ನತ ಸಮಿತಿಯ ವರದಿ, ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯ ನಿರ್ಣಯ ಹಾಗೂ **ವಿಶ್ವವಿದ್ಯಾಲಯದ ವಕೀಲರಾದ ಶ್ರೀ ಕೆ.ಜಿ. ನಾಯಕ್, ಬೆಂಗಳೂರು** ಇವರ **ಕಾನೂನು ಸಲಹೆ,** ದಿನಾಂಕ 20-07-2023 ರಂದು ನಡೆದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತು ಸಭೆಯ ನಿರ್ಣಯವನ್ನು |

Sd/-

| | |
|---|---|
| | ಗಮನಿಸಿ, ಶ್ರೀ ವಿನಯ್ ಬಿ. ಪಾಟೀಲ್ ಇವರ ಬಿ.ಎಸ್ಸಿ (ಕೃಷಿ) ಪದವಿ ಪ್ರವೇಶಾತಿ ಪ್ರಕರಣವನ್ನು **ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ನಲ್ಲಿ ಬಾಕಿ ಇರುವ WP No. 10053/2022 (GM-RES-PIL) ತೀರ್ಪಿನ ಷರತ್ತಿಗೊಳಪಟ್ಟು ಇಲ್ಲಿಗೆ ಮುಕ್ತಾಯಗೊಳಿಸಿ, ವಿಶ್ವವಿದ್ಯಾಲಯದ ಹಂತದಲ್ಲಿ ವಿಲೇವಾರಿ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.**<br>**(ಕ್ರಮ: ಕುಲಸಚಿವರು)** |
| | **ಹೆಚ್ಚುವರಿ ಕಾರ್ಯಸೂಚಿಯ ವಿಷಯಗಳು** |
| **ಹೆಚ್ಚುವರಿ ಕಾರ್ಯಸೂಚಿ ಐಟಂ–1** | **ಎನ್. ಆರ್. ಐ. ಕೋಟಾದಡಿಯಲ್ಲಿ ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಗಳಿಗೆ ನಿಗದಿಪಡಿಸಿದ ಸಾಂಸ್ಥಿಕ ಆರ್ಥಿಕ ಶುಲ್ಕವನ್ನು ಪರಿಷ್ಕರಿಸುವ ಕುರಿತು.**<br>**ಠರಾವು:**<br>ದಿನಾಂಕ 20–07–2023 ರಂದು ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿ ಶಿಫಾರಸ್ಸಿನ ಮೇರೆಗೆ ವಿಸ್ತೃತ ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಅನಿವಾಸಿ ಭಾರತೀಯರು ಅಥವಾ ಅವರಿಂದ ಪ್ರಾಯೋಜಿತ ಕೋಟದಡಿಯಲ್ಲಿ ವಿವಿಧ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಕ್ಕಾಗಿ ಸಾಂಸ್ಥಕ ಶುಲ್ಕ ರಚನೆಯಲ್ಲಿ ಏಕರೂಪತೆಯನ್ನು ತರವು ದಿಸೆಯಲ್ಲಿ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಪದವಿಗಳಿಗೆ 6500 ಯು.ಎಸ್. ಡಾಲರ್ ರಿಂದ 4000 ಯು.ಎಸ್. ಡಾಲರ್ ಮತ್ತು ಪಿ.ಹೆಚ್.ಡಿ. ಪದವಿಗೆ 8000 ಯು.ಎಸ್. ಡಾಲರ್ ರಿಂದ 5000 ಯು.ಎಸ್. ಡಾಲರ್ ಸಾಂಸ್ಥಿಕ ಶುಲ್ಕವನ್ನು 2023–24 ನೇ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ ರಚಿಸಲು / ಪರಿಷ್ಕರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br>**(ಕ್ರಮ: ಕುಲಸಚಿವರು / ಡೀನ್ (ಸ್ನಾತಕೋತ್ತರ ಅಧ್ಯಯನ)** |
| **ಹೆಚ್ಚುವರಿ ಕಾರ್ಯಸೂಚಿ ಐಟಂ–2** | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಡಿಪ್ಲೋಮಾ (ಕೃಷಿ) ಕೋರ್ಸ್‌ನ್ನು ಸ್ಥಗಿತಗೊಳಿಸಲು ಅನುಮೋದನೆ ಕುರಿತು.**<br>**ಠರಾವು:**<br>ದಿನಾಂಕ 20–07–2023 ರಂದು ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿ ಶಿಫಾರಸ್ಸಿನ ಮೇರೆಗೆ ವಿಸ್ತೃತ ಚರ್ಚೆಯ ನಂತರ, ದಿನಾಂಕ 18–07–2022 ರಂದು ಜರುಗಿದ ತಜ್ಞರ ಸಮಿತಿಯ ಸಭೆಯಲ್ಲಿ ಕೈಗೊಂಡ ನಿರ್ಣಯ ಮತ್ತು ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಸೂಚನೆಯಂತೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧೀನದಲ್ಲಿ ಕೃಷಿ ಸಂಶೋಧನಾ ಕೇಂದ್ರ, ಹಗರಿ, ಬಳ್ಳಾರಿ ಮತ್ತು ಕೃಷಿ ಸಂಶೋಧನಾ ಕೇಂದ್ರ, ಬೀದರ್‌ನಲ್ಲಿ ನಡೆಸಲಾಗುತ್ತಿರುವ 2 ವರ್ಷಗಳ ಡಿಪ್ಲೋಮಾ ಕೋರ್ಸ್‌ಗಳನ್ನು 2023–24 ನೇ ಸಾಲಿನಿಂದ ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೂ ಸ್ಥಗಿತಗೊಳಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br>**(ಕ್ರಮ: ಕುಲಸಚಿವರು / ಡೀನ್ (ಸ್ನಾತಕೋತ್ತರ ಅಧ್ಯಯನ)** |
| **ಹೆಚ್ಚುವರಿ ಕಾರ್ಯಸೂಚಿ ಐಟಂ–3** | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ) / ವಿಷಯ ತಜ್ಞರು (ತೋಟಗಾರಿಕೆ) / ವಿಜ್ಞಾನಿ (ತೋಟಗಾರಿಕೆ) ಹುದ್ದೆಗಳ ನೇಮಕಾತಿಗೆ ಎಂ.ಎಸ್ಸಿ (ಕೃಷಿ) (ತೋಟಗಾರಿಕೆ) / ಪಿ.ಹೆಚ್.ಡಿ. (ತೋಟಗಾರಿಕೆ) ವಿಷಯಗಳನ್ನು ಪರಿಗಣಿಸುವ ಕುರಿತು.**<br>**ಠರಾವು:**<br>ದಿನಾಂಕ 20–07–2023 ರಂದು ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿ ಶಿಫಾರಸ್ಸಿನ ಮೇರೆಗೆ ವಿಸ್ತೃತ ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ. (ಕೃಷಿ) ತೋಟಗಾರಿಕೆ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ)/ವಿಷಯ ತಜ್ಞರು (ತೋಟಗಾರಿಕೆ) ಹುದ್ದೆಗಳ ನೇಮಕಾತಿಗೆ ಪರಿಗಣಿಸಲು ಹಾಗೂ ಈ ಕುರಿತು ಸೂಕ್ತ ನಿಯಮಾವಳಿಗಳನ್ನು ರಚಿಸಲು |

| | |
|---|---|
| | ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು) |
| **ಹೆಚ್ಚುವರಿ ಕಾರ್ಯಸೂಚಿ ಐಟಂ–4** | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರ (ಕೃಷಿ ಸಂಖ್ಯಾಶಾಸ್ತ್ರ) ಹುದ್ದೆಯ ನೇರ ನೇಮಕಾತಿಯ ಅರ್ಹತೆಯ ಮಾನದಂಡವನ್ನು ಬದಲಾಯಿಸಲು ಅನುಮೋದನೆ ಕುರಿತು.**<br>**ಠರಾವು:**<br>ದಿನಾಂಕ 20–07–2023 ರಂದು ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿ ಶಿಫಾರಸ್ಸಿನ ಮೇರೆಗೆ ವಿಸ್ತೃತ ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರು (ಅಂಕಿ–ಅಂಶಗಳು) ಹುದ್ದೆಗಳ ನೇಮಕಾತಿಗಳಲ್ಲಿ ಎಂ.ಎಸ್ಸಿ. (ಅಂಕಿ–ಅಂಶಗಳು / ಪಿ.ಹೆಚ್.ಡಿ. (ಅಂಕಿಅಂಶಗಳು) ಪದವಿಗಳನ್ನು ಪೂರೈಸಿರುವ ಅಭ್ಯರ್ಥಿಗಳನ್ನು ಪರಿಗಣಿಸಲು ಹಾಗೂ ಈ ಕುರಿತು ಸೂಕ್ತ ನಿಯಮಾವಳಿಗಳನ್ನು ರಚಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| **ಹೆಚ್ಚುವರಿ ಕಾರ್ಯಸೂಚಿ ಐಟಂ–5** | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಹಸ್ತಪ್ರತಿಗಳನ್ನು ಉನ್ನತ ಮಟ್ಟದ (ಉತ್ಕೃಷ್ಟ ಮಟ್ಟದ) ಸಂಶೋಧನೆಯ ನಿಯತಕಾಲಿಕೆ ಕಿರುಹೊತ್ತಿಗೆಗಳಲ್ಲಿ (NAAS / Scoupus journals) ಪ್ರಕಟಿಸಲು ಆರ್ಥಿಕ ಸಹಾಯವನ್ನು ನೀಡಲು ಅನುಮೋದನೆ ಕುರಿತು.**<br>**ಠರಾವು:**<br>ದಿನಾಂಕ 20–07–2023 ರಂದು ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿ ಶಿಫಾರಸ್ಸಿನ ಮೇರೆಗೆ ವಿಸ್ತೃತ ಚರ್ಚೆಯ ನಂತರ, ರಾಷ್ಟ್ರೀಯ ಕೃಷಿ ವಿಜ್ಞಾನ ಪ್ರೌಢ ವಿದ್ಯಾ ಮಂಡಳಿ (NAAS) ಇಂದ ಮಾನ್ಯತೆ ಪಡೆದಿರುವ ಸೂಚ್ಯಾಂಕ 7.00 ಮತ್ತು 7.00ಕ್ಕೆ ಮೇಲ್ಪಟ್ಟ ನಮೂದಿಸಿರುವ ಸಂಶೋಧನೆ ನಿಯತಕಾಲಿಕೆಗಳಲ್ಲಿ ಪಂಡಿತ ಪದವಿಯ ವಿದ್ಯಾರ್ಥಿಗಳಿಂದ ಪ್ರಕಟಗೊಂಡ ಸಂಶೋಧನಾ ಲೇಖನಗಳಿಗೆ ಗರಿಷ್ಠ ರೂ. 20,000/– (ರೂಪಾಯಿ ಇಪ್ಪತ್ತು ಸಾವಿರಗಳು ಮಾತ್ರ) ಧನ ಸಹಾಯ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು. ಮುಂದುವರೆದು, ಸದರಿ ಧನ ಸಹಾಯವನ್ನು ಸಂಶೋಧನಾ ನಿರ್ದೇಶನಾಲಯ / ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ., ಯೋಜನೆಯಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸುವುದು. ಒಂದುವೇಳೆ ಸದರಿ ನಿರ್ದೇಶನಾಲಯದಲ್ಲಿ ಅನುದಾನ ಲಭ್ಯವಿಲ್ಲದ ಪಕ್ಷದಲ್ಲಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು / ಡೀನ್ (ಸ್ನಾತಕೋತ್ತರ ಅಧ್ಯಯನ)** |
| **ಹೆಚ್ಚುವರಿ ಕಾರ್ಯಸೂಚಿ ಐಟಂ–6** | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ಸಂಶೋಧನೆಯನ್ನು ಪೇಟೆಂಟ್ ಮಾಡಿಸಲು ಮತ್ತು ತಮ್ಮ ಸಂಶೋಧನೆಯ ಮೂಲಕ ನೀತಿ ಸುಧಾರಣೆಗಳಿಗಾಗಿ ಪ್ರೋತ್ಸಾಹಕ ಧನವನ್ನು ನೀಡುವ ಕುರಿತು.**<br>**ಠರಾವು:**<br>ದಿನಾಂಕ 20–07–2023 ರಂದು ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿ ಶಿಫಾರಸ್ಸಿನ ಮೇರೆಗೆ ವಿಸ್ತೃತ ಚರ್ಚೆಯ ನಂತರ, ಸಂಶೋಧನೆಯ ಫಲಿತಾಂಶಗಳ ಮುಖಾಂತರ ನೊಂದಣಿಗಳು (Registration), ವಿಶಿಷ್ಟ ಅಧಿಕಾರ ಪತ್ರಗಳು (Patent) ನೀತಿ ಸುಧಾರಣೆ (Policy reforms) ಇತ್ಯಾದಿಗಳನ್ನು ಆವಿಷ್ಕಾರಗೊಳಿಸಿದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಪ್ರೋತ್ಸಾಹ ಬಹುಮಾನವನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. |

| ಕ್ರ | ಸಂಶೋಧನ ಆವಿಷ್ಕಾರಗಳ ವಿವರ | ಪ್ರೋತ್ಸಾಹ ಬಹುಮಾನ |
|---|---|---|

| ಸಂ. | | ಸ್ನಾತಕೋತ್ತರ | ಪಂಡಿತ ಪದವಿ |
|---|---|---|---|
| 1 | ನೊಂದಣಿಗಳು | 3000 | 3000 |
| 2 | ವಿಶಿಷ್ಟ ಅಧಿಕಾರ ಪತ್ರಗಳು (Patent) | 5000 | 5000 |

ಮುಂದುವರೆದು, ಸದರಿ ಧನ ಸಹಾಯವನ್ನು ಸಂಶೋಧನಾ ನಿರ್ದೇಶನಾಲಯ / ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ., ಯೋಜನೆಯಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸುವುದು. ಒಂದುವೇಳೆ ಸದರಿ ನಿರ್ದೇಶನಾಲಯದಲ್ಲಿ ಅನುದಾನ ಲಭ್ಯವಿಲ್ಲದ ಪಕ್ಷದಲ್ಲಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು

**(ಕ್ರಮ: ಕುಲಸಚಿವರು / ಡೀನ್ (ಸ್ನಾತಕೋತ್ತರ ಅಧ್ಯಯನ)**

**ಹೆಚ್ಚುವರಿ ಕಾರ್ಯಸೂಚಿ ಐಟಂ–7**

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೆರಡನೇಯ ಘಟಿಕೋತ್ಸವದ ಸಂದರ್ಭದಲ್ಲಿ ಹೆಚ್ಚುವರಿ ಅರ್ಹ ಅಭ್ಯರ್ಥಿಗಳಿಗೆ ಚಿನ್ನದ ಪದಕಗಳ ಪ್ರದಾನ ಮಾಡಲು ಅನುಮೋದನೆ ನೀಡುವ ಕುರಿತು.**

**ಠರಾವು:**

ದಿನಾಂಕ 20–07–2023 ರಂದು ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿ ಶಿಫಾರಸ್ಸಿನ ಮೇರೆಗೆ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೆರಡನೇಯ ಘಟಿಕೋತ್ಸವದಲ್ಲಿ **ಎಂ.ಎಸ್ಸಿ. (ಕೃಷಿ) ಕೃಷಿ ವಿಸ್ತರಣಾ ಶಿಕ್ಷಣ ವಿಭಾಗದಲ್ಲಿ ಒಂದು, ಪಿ.ಹೆಚ್.ಡಿ (ಎಫ್.ಎಂ.ಪಿ.ಇ.) ವಿಭಾಗದಲ್ಲಿ ಒಂದು ಮತ್ತು ಪಿ.ಹೆಚ್.ಡಿ (ಮಣ್ಣು ಮತ್ತು ನೀರು ತಂತ್ರಜ್ಞಾನ) ವಿಭಾಗದಲ್ಲಿ ಒಂದು ಹೆಚ್ಚುವರಿ** ಕೃವಿವಿ ಬಂಗಾರದ ಪದಕಗಳನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಅರ್ಹ ವಿದ್ಯಾರ್ಥಿಗಳಿಗೆ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಕುಲಸಚಿವರು)**

**ಹೆಚ್ಚುವರಿ ಕಾರ್ಯಸೂಚಿ ಐಟಂ–8**

**ಸ್ನಾತಕ ಪದವಿಗಳ ಪ್ರಶ್ನೆ ಪತ್ರಿಕೆ ತಯಾರಿಸಲು ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲು ನಿಗದಿಪಡಿಸಿರುವ ಗೌರವಧನವನ್ನು ಪರಿಷ್ಕರಿಸುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಲದಲ್ಲಿ ಥಿಯರಿ ಫೈನಲ್ ಪರೀಕ್ಷೆಯ (1+1) ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲು ಮತ್ತು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲು ನಿಗದಿಪಡಿಸಿದ ಗೌರವ ಧನವನ್ನು ಈ ಕೆಳಕಂಡಂತೆ 2022–23 ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು :

| ಕ್ರ.ಸಂ. | ವಿವರ | ಪ್ರಮಾಣ | ಪ್ರಸ್ತುತ ಧರ | ಪರಿಷ್ಕೃತ ಧರ |
|---|---|---|---|---|
| 1. | ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲು | 1+1 | ರೂ. 1000/– | ರೂ. 2000/– |
| 2. | ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ | 01 | ರೂ. 20/– | ರೂ. 40/– |
| 3. | ಮರು–ಮೌಲ್ಯಮಾಪನ<br>ಎ. ಆಂತರಿಕ<br>ಬಿ. ಬಾಹ್ಯ | <br>10<br>10 | <br>ರೂ. 150/–<br>ರೂ. 300/– | <br>ರೂ. 300/–<br>ರೂ. 500/– |

**(ಕ್ರಮ : ಕುಲಸಚಿವರು)**

**ಹೆಚ್ಚುವರಿ ಕಾರ್ಯಸೂಚಿ ಐಟಂ–9**

**ರಿವಾರ್ಡ್ ಸಂಶೋಧನಾ ಯೋಜನೆಯಡಿಯಲ್ಲಿ ಮೂರು ನಿಶ್ಚಿತ ಸ್ಥಳಗಳಲ್ಲಿ ನಿಯೋಜಿತ ಸ್ವಯಂಚಾಲಿತ ಹವಾಮಾನ ಸೂಚಿ (Automatic Weather Station) ಗಳನ್ನು ವಾರ್ಷಿಕವಾಗಿ ಸಮಗ್ರ ದುರಸ್ಥಿ ಹಾಗೂ ನಿರ್ವಹಣೆಯ ಜವಾಬ್ದಾರಿಯನ್ನು ನಿಶ್ಚಿತ ಸಂಸ್ಥೆಗೆ ಹಾಗೂ ಒಪ್ಪಿತ ವೆಚ್ಚದ ಮೊತ್ತಕ್ಕೆ ವಹಿಸಲು ಅನುಮೋದನೆ ಕುರಿತು.**

| | |
|---|---|
| | **ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ವ್ಯಾಪ್ತಿಯಡಿಯಲ್ಲಿ ಸ್ಥಿತ ಟೆಕರಾಳ (ಯಾದಗಿರಿ ಜಿಲ್ಲೆ), ತೆಂಗಳಿ (ಕಲಬುರಗಿ ಜಿಲ್ಲೆ) ಹಾಗೂ ಕಾಳಮಂಡರಗಿ ತಾಂಡ (ಕಲಬುರಗಿ ಜಿಲ್ಲೆ) ಕಿರುಜಲಾನಯನಗಳಲ್ಲಿ ಸ್ಥಾಪಿಸಲಾದ ಸ್ವಯಂಚಾಲಿತ ಹವಾಮಾನ ಸೂಚಿಗಳನ್ನು **1ನೇ ಏಪ್ರಿಲ್ 2023 ರಿಂದ ಮಾರ್ಚ 2027 ರವರೆಗೆ** ವಾರ್ಷಿಕವಾಗಿ ಸಮಗ್ರವಾಗಿ ದುರಸ್ಥಿ ಹಾಗೂ ನಿರ್ವಹಣೆ ಮಾಡಲು ಮೆಸರ್ಸ್ ಫೇಮ್ ಎಂಟರ್‌ಪ್ರೈಸಸ್, ಇಂದೋರ್ (ಮಧ್ಯಪ್ರದೇಶ) ಇವರಿಗೆ **ರೂ. 27,78,900 (ಇಪ್ಪತ್ತೇಳು ಲಕ್ಷ ಎಪ್ಪತ್ತೆಂಟು ಸಾವಿರದ ಒಂಬತ್ತು ನೂರು ರೂಪಾಯಿಗಳು) ವೆಚ್ಚದ ಮೊತ್ತದೊಂದಿಗೆ ಸದರಿ ಕಾರ್ಯಗಳಿಗೆ, ಸದರಿ ನಿರ್ವಹಣಾ ಸಂಸ್ಥೆ ಹಾಗೂ ಕುಲಸಚಿವರು, ಕೃವಿ.ವಿ., ರಾಯಚೂರು ಇವರ ನಡುವೆ ಒಪ್ಪಿತವಾಗುವ ಒಡಂಬಡಿಕೆಯ ಅನುಸಾರ ವಹಿಸಿಕೊಡಲು** ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>ಮುಂದುವರೆದು, **ಶ್ರೀ ಮಲ್ಲಿಕಾರ್ಜುನ್, ಮಾನ್ಯ ಸದಸ್ಯರು, ವ್ಯವಸ್ಥಾಪನಾ ಮಂಡಳಿ ಇವರು ವಿಶ್ವವಿದ್ಯಾಲಯದ ಮುಖ್ಯದ್ವಾರದ ಬಳಿ ಸಾರ್ವಜನಿಕರಿಗೆ ಗೋಚರಿಸುವಂತೆ ಹವಾಮಾನದ ವರದಿಯನ್ನು ಭಿತ್ತರಿಸಲು ಸಂಬಂಧಪಟ್ಟವರು ಸೂಕ್ತ ಕ್ರಮವಿಡಲು ಸಲಹೆ ನೀಡಿದರು.**<br>**(ಕ್ರಮ : ಕುಲಸಚಿವರು)** |
| **ಹೆಚ್ಚುವರಿ ಕಾರ್ಯಸೂಚಿ ಐಟಂ–10** | **ಸಿ.ಎ.ಎಸ್.–2016 ರಡಿಯಲ್ಲಿ ಪ್ರಾಧ್ಯಾಪಕದಿಂದ ಪ್ರಾಧ್ಯಾಪಕ(ಎಚ್.ಎ.ಜಿ.)ಯ ಮುಂಬಡ್ತಿ ನಿಯಮಾವಳಿಗಳನ್ನು ಮಾರ್ಪಡಿಸುವ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ದಿನಾಂಕ 09–03–2019 ರ ಈ ಕಛೇರಿ ತಿದ್ದುಪಡಿ ಆದೇಶವನ್ನು ಸಿ.ಎ.ಎಸ್. ನಿಯಮಾವಳಿಗಳನ್ವಯ ಮಾರ್ಪಡಿಸಿ, ಪ್ರಾಧ್ಯಾಪಕರಿಂದ ಹಿರಿಯ ಪ್ರಾಧ್ಯಾಪಕರು ಎಂದು ಮುಂಬಡ್ತಿ ನೀಡುವ ಉದ್ದೇಶಕ್ಕಾಗಿ ಕಾರ್ಯನಿರತ ಪ್ರಾಧ್ಯಾಪಕರ ಸಂಖ್ಯೆಯ ಬದಲಾಗಿ ಪ್ರಾಧ್ಯಾಪಕರ ಮಂಜೂರಾದ ಹುದ್ದೆಗಳ ಶೇ.10 ರಷ್ಟು ಹುದ್ದೆಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ಹುದ್ದೆಗಳು ಖಾಲಿಯಾದಗಿನಿಂದ ಮುಂಬಡ್ತಿ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/– 11–08–2023 | ಸಹಿ/– 11–08–2023 |
|---|---|
| **(ಎಂ. ಹನುಮಂತಪ್ಪ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ. ವೀರನಗೌಡ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ. ವೀರನಗೌಡ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.